ಬಾಗೇಪಲ್ಲಿ ಕ್ಷೇತ್ರದಲ್ಲಿ ರೀಲರ್‌ಗಳು ಇಲ್ಲದ ಕಾರಣ ಪ್ರಸ್ತುತ ಗೂಡಿನ ಮಾರುಕಟ್ಟೆಯನ್ನು ಸ್ಥಾಪಿಸಿರುವುದಿಲ್ಲ. ಆದರೆ ಈ ತಾಲ್ಲೂಕಿನ ರೇಷ್ಮೆ ಬೆಳೆಗಾರರು ಹತ್ತಿರದ ಚಿಕ್ಕಬಳ್ಳಾಪುರ, ಚಿಂತಾಮಣಿ, ಶಿಡ್ಲಘಟ್ಟ ಮತ್ತು ಶ್ರೀನಿವಾಸಪುರದಲ್ಲಿ ಸ್ಥಾಪಿಸಲಾಗಿರುವ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ತಾವು ಬೆಳೆದ ಗೂಡಿನ ವಹಿವಾಟು ನಡೆಸುತ್ತಿದ್ದಾರೆ. ಈ ಮೇಲ್ಕಾಣಿಸಿರುವ ತಾಲ್ಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೀಲರುಗಳು ಇರುವ ಕಾರಣ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ರೈತರಿಗೂ ಸ್ಪರ್ಧಾತ್ಮಕ ದರ ದೊರೆಯುತ್ತಿದೆ.

2) ಬಂದಿದೆ.

ರೀಲರ್‌ಗಳ ಸಂಖ್ಯೆಯು ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಹೆಚ್ಚಾದಲ್ಲಿ ಒಂದು ಪ್ರತ್ಯೇಕವಾದ ಮಾರುಕಟ್ಟೆ ಕಟ್ಟಡವನ್ನು ನಿರ್ಮಿಸಿ ಮಾರುಕಟ್ಟೆ ಚಟುವಟಿಕೆಗಳನ್ನು ಪ್ರಾರಂಭಿಸಲಾಗುವುದು.

ಮೈಸೂರು ನಗರದ ಅನೇಕ ಅನಧಿಕೃತ ಬಡಾವಣೆಗಳನ್ನು ಸಕ್ರಮಗೊಳಿಸಿ ಮನೆ ಕಟ್ಟಲು ಲೈಸನ್ಸ್ ನೀಡುವುದು.

325(85)

ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಅನೇಕ ಅನಧಿಕೃತ ಬಡಾವಣೆಗಳನ್ನು ಸಕ್ರಮಗೊಳಿಸಿ ಹೋಲ್ಡರ್ ಖಾತೆಗಳನ್ನು ನೀಡಲಾಗುತ್ತಿದ್ದು ಸದರಿ ಬಡಾವಣೆಗಳಲ್ಲಿ ನಿವೇಶನದಾರರು ಹೊಸದಾಗಿ ಮನೆ ಕಟ್ಟಲು ಲೈಸನ್ಸ್ ನೀಡಲು ಸರ್ಕಾರವು ತೀರ್ಮಾನಿಸಿದೆಯೆ?

ಆ) ಹೀಗೆ ಲೈಸೆನ್ಸ್ ನೀಡುವುದರಿಂದ ವ್ಯವಸ್ಥಿತವಾಗಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಿದಂತಾಗುವುದಿಲ್ಲವೆ?

ಇ) ಈ ಬಗ್ಗೆ ಲೈಸನ್ಸ್ ನೀಡುವಲ್ಲಿ ಸರ್ಕಾರದ ಅಭಿಪ್ರಾಯವೇನು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮೈಸೂರು ನಗರದಲ್ಲಿ ಅನಧಿಕೃತ ಬಡಾವಣೆಗಳ ಸಕ್ರಮ.

326(86)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ(ಚಾಮರಾಜ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿರುವ ಅನಧಿಕೃತ ಬಡಾವಣೆಗಳು ಯಾವುವು?

ಆ) ಆಯಾಯಾ ಅನಧಿಕೃತ ಬಡಾವಣೆಯಲ್ಲಿ ಎಷ್ಟೆಷ್ಟು ಮನೆ, ನಿವೇಶನಗಳಿವೆ: ವಿವರ ಒದಗಿಸುವುದು.

ಇ) ಅವುಗಳಲ್ಲಿ ಎಷ್ಟು ಮಂದಿ ಮನೆಗಳವರು ಹೋಲ್ಡರ್ ಖಾತೆ ಪಡೆದಿರುವರು: ಉಳಿಕೆ ಎಷ್ಟು ಮಂದಿ ಪಡೆಯಬೇಕಿದೆ?

ಈ) ಉಳಿಕೆ ಪಡೆಯಬೇಕಾದವರಿಗೆ ಹೋಲ್ಡರ್ ಖಾತೆ ಪಡೆಯಲು ಎಷ್ಟು ಕಾಲಾವಕಾಶ ನೀಡಲಾಗುವುದು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು):

ಅ ಮತ್ತು ಆ) ಪಟ್ಟಿ ಲಗತ್ತಿಸಿದೆ.

ಇ ಮತ್ತು ಈ) ಹೋಲ್ಡರ್ ಖಾತಾ ಪಡೆಯಲು ಯಾವುದೇ ಕಾಲಾವಕಾಶ ನಿಗಧಿಪಡಿಸಿಲ್ಲ. ಆದರೂ ಅಭಿವೃದ್ಧಿ ಶುಲ್ಕ ಮತ್ತು ಕಂದಾಯ ಪಾವತಿ ಮಾಡಿರುವ 4765 ಜನರಿಗೆ ಹೋಲ್ಡರ್ ಖಾತಾವನ್ನು ನೀಡಲಾಗಿದೆ. (2001 ಇಸವಿ ಜನವರಿ ಅಂತ್ಯದವರೆಗೆ) ಉಳಿದವರು ಹೋಲ್ಡರ್ ಖಾತಾಗಾಗಿ ಅರ್ಜಿ ಸಲ್ಲಿಸಿಲ್ಲ.